# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 57/2022

ಪಿಡಬ್ಲ್ಯೂ: 25
ಸಿಡಬ್ಲ್ಯೂ: 48

**ದಿನಾಂಕಃ 15-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | ಃ ಪಾಂಡುರಂಗ |
| ತಂದೆಯ ಹೆಸರು | ಃ ರಾಮಾಂಜನಪ್ಪ |
| ವಯಸ್ಸು | ಃ 56 ವರ್ಷ |
| ಉದ್ಯೋಗ | ಃ ಡಿವೈ.ಎಸ್.ಪಿ. , ಕೆಜಿಎಫ್ ಸಬ್ ಡಿವಿಜನ್ |
| ವಾಸ ಸ್ಥಳ | ಃ ಕೆಜಿಎಫ್ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ದಿನಾಂಕ **26–10–2019** ರಿಂದ **01–07–2022** ರವರೆಗೆ ನಾನು ಡಿವೈ.ಎಸ್.ಪಿ. ಎಂದು ಚಿತ್ರದುರ್ಗ ಉಪ ವಿಭಾಗದಲ್ಲಿ ಸೇವೆ ಸಲ್ಲಿಸಿದ್ದೇನೆ. ದಿನಾಂಕ **07–01–2022** ರಂದು ಈ ಪ್ರಕರಣದ ಮುಂದಿನ ತನಿಖೆಯ್ನು ಪೊಲೀಸ್ ಇನ್ಸ್ ಪೆಕ್ಟರ್ ಮಧು (ಚಾಸಾ–**47**) ಇವರಿಂದ ವಹಿಸಿಕೊಂಡು ಹೂತಿಟ್ಟ ಶವವನ್ನು ಹೊರಗೆ ತೆಗೆಸಿ ಮಹಜರ್ ಕ್ರಮ ಜರುಗಿಸಿಕೊಡುವಂತೆ ಎ.ಸಿ. ಚಿತ್ರದುರ್ಗ ಇವರಿಗೆ ಲಿಖಿತವಾಗಿ ವಿನಂತಿಸಿಕೊಂಡೆ. ಅಲ್ಲದೇ ಇಬ್ಬರು ಪಂಚರನ್ನು ಕಳುಹಿಸಿಕೊಡುವಂತೆ ಉಪ ತಹಶೀಲ್ದಾರ್, ಭರಮಸಾಗರ ನಾಡ ಕಛೇರಿ ಇವರಿಗೆ ಸೂಚಿಸಿದೆ. ಸದರಿಯವರು ಜಯಶೀಲ ಹಾಗೂ ತಿಪ್ಪೇಸ್ವಾಮಿ ಇವರನ್ನು ಪಂಚರಾಗಿ ಕಳುಹಿಸಿಕೊಟ್ಟಿದ್ದು ಅವರ ಸಮಕ್ಷಮ ಶವವನ್ನು ಹೊರಗೆ ತೆರೆಯುವ ಕುರಿತು ಆರೋಪಿತನ ವಾಸದ ಮನೆಗೆ ಬೇಟಿ ಕೊಟ್ಟು ಅಲ್ಲಿ ಪಿರ್ಯಾದುದಾರ ತೋರಿಸಿದಂತಹ ಹೂತಿಟ್ಟ ಸ್ಥಳವನ್ನು ಮದ್ಯಾಹ್ನ **12.00** ರಿಂದ **12.40** ರವರೆಗೆ ಸದರಿ ಪಂಚರ ಸಮಕ್ಷಮ ಕ್ರಮ ಜರುಗಿಸಲಾಯಿತು. ಆ ಕಾಲಕ್ಕೆ ಪೊಟೋಗಳನ್ನು ತೆಗೆಯಲಾಯಿತು. ನಂತರ ಎ.ಸಿ.ರವರು ಸ್ಥಳಕ್ಕೆ ಆಗಮಿಸಿ ಶವವನ್ನು ಹೊರೆಗೆ ತೆಗೆಸಿ ಶವ ತನಿಖೆಗೆ ಒಳಪಡಿಸಿ ಶವ ಪಂಚನಾಮೆ ಕೈಗೊಳ್ಳುವಂತೆ ವೈದ್ಯರಿಗೆ ನಿವೇದಿಸಿಕೊಂಡರು. ಎಸಿಯವರಿಗೆ ಬರೆದಂತಹ ಮನವಿಯನ್ನು ನೋಡುತ್ತಿದ್ದು ಅದನ್ನು ನಿಪಿ–**47** ಎಂದು, ಜಯಶೀಲ ಮತ್ತು ತಿಪ್ಪೇಸ್ವಾಮಿರವರಿಗೆ ನೀಡಲಾದಂತಹ ನೋಟೀಸುಗಳನ್ನು ನಿಪಿ–**48** ರಿಂದ **50** ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಮಾಡಲಾದ ಮಹಜರನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–**2** ಎಂದು ಗುರುತಿಸಲಾಗಿದೆ. ಅದೇ ರೀತಿ ಆಗ ತೆಗೆಯಲಾದ ಪೊಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ–**3** ಹಾಗೂ **4** ಎಂದು ಗುರುತಿಸಲಾಗಿದೆ.

**2.** ಶವವನ್ನು ಹೊರಗೆ ತೆಗೆದ ನಂತರ ಸದರಿ ಜಯಶೀಲ ಹಾಗೂ ತಿಪ್ಪೇಸ್ವಾಮಿ ಇವರ ಸಮಕ್ಷಮ **3.15** ರಿಂದ **3.45** ರವರೆಗೆ ಇನ್ನೊಂದು ಮಹಜರ್ ಕ್ರಮ ಜರುಗಿಸಿದೆ ಮತ್ತು ಆ ಕಾಲಕ್ಕೆ ಪೊಟೋಗಳನ್ನು ತೆಗೆಸಿದೆ. ಆ ಕಾಲಕ್ಕೆ ಮಾಡಲಾದ ಮಹಜರನ್ನು ನೋಡುತ್ತಿದ್ದು ಅದನ್ನು ನಿಪಿ–7 ಎಂದು ಈಗಾಗಲೇ ಗುರುತಿಸಲಾಗಿದ್ದು, ಆಗ ತೆಗೆಯಲಾದ ಪೊಟೋಗಳನ್ನು

ನಿಪಿ–**8** ಹಾಗೂ **9** ಎಂದು ಗುರುತಿಸಲಾಗಿದೆ. ಆ ಮಹಜರುಗಳ ಕಾಲಕ್ಕೆ ಪೊಟೋ ತೆಗೆದಂತಹ ನಮ್ಮ ಸಿಬ್ಬಂದಿ ರವಿ ಇವರಿಂದ ಕಲಂ **65** ಬಿ ಅನ್ವಯ ದೃಢೀಕರಣಗಳನ್ನು ಪಡೆದುಕೊಂಡೆ. ಅವುಗಳನ್ನು ನೋಡುತ್ತಿದ್ದು ಈಗಾಗಲೇ ಸದರಿ ದೃಢೀಕರಣಗಳನ್ನು ನಿಪಿ–**42** ಹಾಗೂ **43** ಎಂದು ಗುರುತಿಸಲಾಗಿದೆ.

**3.** ನಂತರ ಸದರಿ ಜಯಶೀಲ ಹಾಗೂ ತಿಪ್ಪೇಸ್ವಾಮಿ ಇವರ ಸಮಕ್ಷಮ ಪಿರ್ಯಾದಿ ಕರಿಯಪ್ಪ ತನ್ನ ಮಗಳ ಮದುವೆ ಕಾಲಕ್ಕೆ ಆಕೆಯ ಸಂಸಾರಕ್ಕೆ ತಾನು ನೀಡಿದಂತಹ ಸಾಮಾನುಗಳನ್ನು ಹಾಗೂ ಬೆಳ್ಳಿಯ ವಸ್ತುಗಳನ್ನು ಅಂದರೆ ಆ ಮನೆಯಲ್ಲಿದ್ದಂತಹ ವಸ್ತುಗಳನ್ನು ಹಾಜರುಪಡಿಸಿದ್ದು ಆ ಕುರಿತು ಮದ್ಯಾಹ್ನ **4.00** ರಿಂದ **4.45** ರ ಅವಧಿಯಲ್ಲಿ ಮಹಜರ್ ಕ್ರಮ ಜರುಗಿಸಿ ಆ ವಸ್ತುಗಳನ್ನು ನಮ್ಮ ವಶಕ್ಕೆ ತೆಗೆದುಕೊಂಡು ನ್ಯಾಯಾಲಯಕ್ಕೆ ಪಿಎಫ್ ಸಲ್ಲಿಸಿದೆ ಮತ್ತು ಆ ಮಹಜರ್ ಕಾಲಕ್ಕೆ ಪೊಟೋ ತೆಗೆಸಿದೆ. ಸದರಿ ಮಹಜರನ್ನು ನೋಡುತ್ತಿದ್ದು ಅದನ್ನು ನಿಪಿ–**10** ಎಂದು, ಆಗ ತೆಗೆಯಲಾದ ಪೊಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ–**11** ಹಾಗೂ **12** ಎಂದು ಈಗಾಗಲೇ ಗುರುತಿಸಲಾಗಿದೆ. ಅದೇ ದಿನ ನ್ಯಾಯಾಲಯಕ್ಕೆ ಪ್ರಥಮ ವರ್ತಮಾನ ವರದಿಯನ್ನು ತೆಗೆದುಕೊಂಡು ಹೋಗಿ ನೀಡಿದಂತಹ ಸಿಬ್ಬಂದಿ ನಾಗಭೂಷಣ್ ರವರ ಹೇಳಿಕೆ ಮಾಡಿಕೊಂಡೆ.

**4.** ದಿನಾಂಕ **08–01–2022** ರಂದು ಸಾಕ್ಷಿದಾರರಾದ ರಾಜಪ್ಪ, ರೇಣುಕಮ್ಮ, ನಾರಮ್ಮ, ಭರತ್ ಇವರುಗಳಿಗೆ ನೋಟೀಸ್ ಕೊಟ್ಟು ಕಛೇರಿಗೆ ಕರೆಸಿ ಅವರ ಹೇಳಿಕೆಗಳನ್ನು ಮಾಡಿಕೊಂಡು ಅವರಿಂದ ಮುಚ್ಚಳಿಕೆ ಪತ್ರಗಳನ್ನು ಬರೆಸಿಕೊಂಡೆ. ಅದೇ ದಿನ ರಾತ್ರಿ **8.00** ಗಂಟೆಗೆ ಪಿ.ಎಸ್.ಐ ರಾಜುರವರು ಆರೋಪಿತನನ್ನು ಪತ್ತೆ ಮಾಡಿಕೊಂಡು ಬಂದು ರಾತ್ರಿ **9.30** ಗಂಟೆಗೆ ನಾನು ಠಾಣೆಯಲ್ಲಿದ್ದಾಗ ನನ್ನ ಮುಂದೆ ಆತನನ್ನು ಹಾಜರುಪಡಿಸಿದರು. ಆರೋಪಿತನನ್ನು ಕೂಲಂಕುಶವಾಗಿ ವಿಚಾರಣೆ ಮಾಡಿ, ಆತನ ದಸ್ತಗಿರಿ ಮಾಡಿ, ದಸ್ತಗಿರಿ ನಿಯಮಗಳನ್ನು ಪಾಲಿಸಿ ಆತನ ಸ್ವ–ಇಚ್ಛಾ ಹೇಳಿಕೆಯನ್ನು ಮಾಡಿಕೊಂಡೆ. ಆತ ತನ್ನನ್ನು ಕರೆದುಕೊಂಡು ಹೋದಲ್ಲಿ ಕೃತ್ಯ ನಡೆದ ಸ್ಥಳವನ್ನು ತೋರಿಸುತ್ತೇನೆಂದು ನನಗೆ ಹೇಳಿದ. ಸದರಿ ಹೇಳಿಕೆಯನ್ನು ನೋಡುತ್ತಿದ್ದು ಹೇಳಿಕೆಯ ಸಂಬಂಧಿಸಿದ ಭಾಗವನ್ನು ನಿಪಿ–**51** ಎಂದು ಗುರುತಿಸಲಾಯಿತು. ಅದೇ ದಿನ ಪಿ.ಎಸ್.ಐ ರಾಜುರವರ ವರದಿ ಪಡೆದೆ ಹಾಗೂ ಸಿಬ್ಬಂದಿ ಲೀಲಾವತಿ ಇವರ ಹೇಳಿಕೆಯನ್ನು ಮಾಡಿಕೊಂಡೆ.

**5.** ದಿನಾಂಕ **09–01–2022** ರಂದು ಆರೋಪಿತನನ್ನು ಪುನಃ ವಿಚಾರಣೆಗೊಳಪಡಿಸಿದ್ದು ಆತ ತಾನು ಬಟ್ಟೆಗಳನ್ನು ಬಿಸಾಕಿದಂತಹ ಸ್ಥಳವನ್ನು ತೋರಿಸುವುದಾಗಿ ಹೇಳಿದ್ದು ಅದಕ್ಕೆ ಸಂಬಂಧಿಸಿದಂತೆ ಆತನ ಸ್ವ–ಇಚ್ಛಾ ಹೇಳಿಕೆಯನ್ನು ಮಾಡಿಕೊಂಡಿದ್ದು, ಅದನ್ನು ನೋಡುತ್ತಿದ್ದು, ಸಂಬಂಧಿಸಿದ ಭಾಗವನ್ನು ನಿಪಿ–**52** ಎಂದು ಗುರುತಿಸಲಾಯಿತು. ನಿಪಿ–**51** ರಂತೆ ಪಂಚರಾದ

ಪ್ರದೀಪ್ ಹಾಗೂ ಸುನಂದ ಇವರ ಸಮಕ್ಷಮ ಮದ್ಯಾಹ್ನ **12.20** ರಿಂದ **1.00** ರವರೆಗೆ ಆರೋಪಿತನ ಮನೆಯಿಂದ ಆತ ತೆಗೆದು ತೋರಿಸಿದಂತಹ ಕೃತ್ಯಕ್ಕೆ ಬಳಸಿದಂತಹ ಒನಕೆ ಹಾಗೂ ಹಾರೆ ಇವುಗಳನ್ನು ನನ್ನ ವಶಕ್ಕೆ ತೆಗೆದುಕೊಂಡು ನ್ಯಾಯಾಲಯಕ್ಕೆ ಪಿಎಫ್ ಸಲ್ಲಿಸಿದೆ ಮತ್ತು ಆ ಕುರಿತು ಮಹಜರ್ ಮಾಡಿದೆ. ಸದರಿ ಪಂಚರಿಗೆ ನೀಡಲಾದಂತಹ ನೋಟೀಸನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–**16** ಎಂದು ಗುರುತಿಸಿದೆ. ಸದರಿ ಮಹಜರನ್ನು ನೋಡುತ್ತಿದ್ದು ಅದನ್ನು ನಿಪಿ–**18** ಎಂದು ಈಗಾಗಲೇ ಗುರುತಿಸಲಾಗಿದೆ. ಆಗ ತೆಗೆಯಲಾದ ಪೊಟೋಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ–**19** ರಿಂದ **22** ಎಂದು ಗುರುತಿಸಲಾಗಿದೆ. ಸದರಿ ಒನಕೆ ಹಾಗೂ ಹಾರೆ ಇವುಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮುದ್ದೆ ಮಾಲು **18** ಹಾಗೂ **19** ಎಂದು ಅನುಕ್ರಮವಾಗಿ ಗುರುತಿಸಲಾಗಿದೆ.

**6.** ಅದೇ ದಿನ ಆರೋಪಿ ಸದರಿ ಪಂಚರ ಸಮಕ್ಷಮ ತಾನು ಶವವನ್ನು ಹೂತಿಟ್ಟಂತಹ ಶವವನ್ನು ತೋರಿಸಿದ್ದು ಆ ಕುರಿತು ಪಂಚನಾಮೆ ಕ್ರಮ ಜರುಗಿಸಿದೆ. ಆಗ ಮಾಡಲಾದ ಮಹಜರನ್ನು ನೋಡುತ್ತಿದ್ದು ಅದನ್ನು ನಿಪಿ–**23** ಎಂದು ಹಾಗೂ ಆಗ ತೆಗೆಯಲಾದ **2** ಪೊಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ–**24** ಹಾಗೂ **25** ಎಂದು ಈಗಾಗಲೇ ಗುರುತಿಸಲಾಗಿದೆ.

**7.** ನಂತರ ಆರೋಪಿ ತನ್ನ ಸ್ವ–ಇಚ್ಛಾ ಹೇಳಿಕೆಯಂತೆ ಮುರುಘಾ ಮಠದ ಕೆರೆಯ ಬಳಿ ಕಲ್ಲುಗಳ ಮದ್ಯದಲ್ಲಿ ತಾನು ಬಿಸಾಕಿದಂತಹ ಬಟ್ಟೆಗಳನ್ನು ಕರೆದುಕೊಂಡು ಹೋಗಿ ತೋರಿಸಿದ್ದು ಪಂಚರಾದ ಸಾದತ್ ಬೇಗ್ ಹಾಗೂ ವಿಕಾಸ್ ಇವರಿಗೆ ನೋಟೀಸ್ ನೀಡಿ ಅವರ ಸಮಕ್ಷಮ ಸಂಜೆ **5.30** ರಿಂದ **6.00** ರ ಅವಧಿಯಲ್ಲಿ ಆ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿ ವಶಪಡಿಸಿಕೊಂಡಂತಹ ಒಂದು ಬಿಳಿ ಅಂಗಿ ಹಾಗೂ ಒಂದು ಬಿಳಿ ಲುಂಗಿ ಇವುಗಳ ಕುರಿತು ನ್ಯಾಯಾಲಯಕ್ಕೆ ಪಿಎಫ್ ಸಲ್ಲಿಸಿದೆ. ಆ ಕಾಲಕ್ಕೆ ಪೊಟೋಗಳನ್ನು ಕೂಡಾ ತೆಗೆಸಿದೆ. ಪಂಚರಿಗೆ ನೀಡಲಾದಂತಹ ನೋಟಿಸನ್ನು ನೋಡುತ್ತಿದ್ದು ಅದನ್ನು ನಿಪಿ–**52** ಎಂದು ಗುರುತಿಸಲಾಯಿತು. ಆಗ ಮಾಡಲಾದ ಮಹಜರನ್ನು ನೋಡುತ್ತಿದ್ದು ಅದನ್ನು ನಿಪಿ–**44** ಎಂದು ಈಗಾಗಲೇ ಗುರುತಿಸಲಾಗಿದೆ. ಆ ಕಾಲಕ್ಕೆ ತೆಗೆಯಲಾದಂತಹ ಪೊಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ–**36** ರಿಂದ **41** ಎಂದು ಈಗಾಗಲೇ ಗುರುತಿಸಲಾಗಿದೆ.

(ಈ ಹಂತದಲ್ಲಿ ಮಾನ್ಯ ಪಿಪಿಯವರ ಕೋರಿಕೆಯ ಮೇರೆಗೆ ಮೊಹರು ಸುಸ್ಥಿತಿಯಲ್ಲಿರುವ ಎರಡು ಬಿಳಿ ಬಟ್ಟೆ ಚೀಲಗಳನ್ನು ಆರೋಪಿತ ಪರ ವಕೀಲರಾದ ಶ್ರೀಮತಿ ಎಂ.ಬಿ. ಇವರ ಸಮಕ್ಷಮ ತೆರೆಯಲಾಯಿತು)

ತುಂಬು ತೋಳಿನ ಬಿಳಿ ಅಂಗಿಯನ್ನು ಮುದ್ದೆ ಮಾಲು **27** ಎಂದು ಮತ್ತು ನೀಲಿ ಬಣ್ಣದ ಪಟ್ಟೆಗಳುಳ್ಳ ಲುಂಗಿಯನ್ನು ಮುದ್ದೆ ಮಾಲು **28** ಎಂದು ಗುರುತಿಸಲಾಯಿತು. ಅದಕ್ಕೆ

ಸಂಬಂಧಿಸಿದ ನಮ್ಮ ಸಿಬ್ಬಂದಿ ನೀಡಿದಂತಹ ಕಲಂ **65** ಬಿ ದೃಢೀಕರಣವನ್ನು ಈಗಾಗಲೇ ನಿಪಿ–**43** ಎಂದು ಗುರುತಿಸಲಾಗಿದೆ.

**8**. ಅದೇ ದಿನ ಸಾಕ್ಷಿದಾರರಾದ ಪರಮೇಶ್ವರಪ್ಪ, ರಂಗನಾಥ, ಶಶಿಧರ, ಗದುಗೇಶ ಇವರುಗಳಿಗೆ ನೋಟೀಸುಗಳನ್ನು ನೀಡಿ, ಕಛೇರಿಗೆ ಕರೆಸಿ ಅವರ ಹೇಳಿಕೆಗಳನ್ನು ಮಾಡಿಕೊಂಡು ಅವರಿಂದ ಮುಚ್ಚಳಿಕೆ ಪತ್ರಗಳನ್ನು ಪಡೆದೆ. ನಂತರ ಆರೋಪಿತನನ್ನು ಮುಂದಿನ ಕ್ರಮ ಜರುಗಿಸುವ ಕುರಿತು ಸಿಬ್ಬಂದಿಗಳ ಮೂಲಕ ನ್ಯಾಯಾಲಯದಲ್ಲಿ ಹಾಜರುಪಡಿಸಲಾಯಿತು. ದಿನಾಂಕ **11–01–2022** ರಂದು ಕೃತ್ಯ ನಡೆದ ಸ್ಥಳವಾದ ಆರೋಪಿತನ ಮನೆಯ ದಾಖಲೆಯನ್ನು ನೀಡುವಂತೆ ಪಿಡಿಓ, ಆಲಘಟ್ಟ ಇವರಿಗೆ ನಿವೇದನೆ ಸಲ್ಲಿಸಿದೆ. ಅಲ್ಲದೇ ಆ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿಕೊಡುವಂತೆ ಚಿತ್ರದುರ್ಗದ ಎಇಇರವರಿಗೆ ಸೂಚಿಸಿದೆ. ದಿನಾಂಕ **25–12–2015** ರಂದು ಆರೋಪಿ ಮೃತಳನ್ನು ಮದುವೆಯಾದ ಬಗ್ಗೆ ದಾಖಲೆ ಒದಗಿಸುವಂತೆ ಅಧ್ಯಕ್ಷರು, ಅಣ್ಣನ ಬಳಗ, ಶ್ರೀ ತರಳಬಾಳು ಬೃಹನ್ಮಠ, ಸಿರಿಗೆರೆ ಇವರಿಗೆ ಕೋರಿಕೆಯನ್ನು ಕಳುಹಿಸಿಕೊಟ್ಟೆ. ಅದೇ ದಿನ ಪಿರ್ಯಾದುದಾರ ಕರಿಯಪ್ಪ ಇವರು ಕಛೇರಿಗೆ ಹಾಜರಾಗಿ ಆರೋಪಿ ಹಾಗೂ ಮೃತಳ ಮದುವೆಯ ಕಾಲಕ್ಕೆ ಮಾಡಿಸಲಾದಂತಹ ಲಗ್ನಪತ್ರಿಕೆಯನ್ನು ನಮ್ಮ ಕಛೇರಿಯಲ್ಲಿ ಹಾಜರುಪಡಿಸಿದ್ದು ಪಂಚರಾದ ಸತೀಶ್ ಹಾಗೂ ಸಿದ್ದಲಿಂಗಪ್ಪ ಇವರಿಗೆ ನೋಟೀಸ್ ನೀಡಿ, ಅವರನ್ನು ಬರಮಾಡಿಕೊಂಡು ಅವರ ಸಮಕ್ಷಮ ಸದರಿ ಪಿರ್ಯಾದುದಾರರು ಹಾಜರುಪಡಿಸಿದ ಲಗ್ನಪತ್ರಿಕೆಯನ್ನು ಮದ್ಯಾಹ್ನ **12.30** ರಿಂದ **1.00** ಗಂಟೆಯ ಅವಧಿಯಲ್ಲಿ ಮಹಜರ್ ಮೂಲಕ ಅಮಾನತ್ತುಪಡಿಸಿಕೊಂಡೆ. ಅ ಕಾಲಕ್ಕೆ ಪೊಟೋಗಳನ್ನು ಕೂಡಾ ತೆಗೆಸಲಾಯಿತು. ಆಗ ಮಾಡಲಾದ ಮಹಜರನ್ನು ನೋಡುತ್ತಿದ್ದು ಅದನ್ನು ನಿಪಿ–**14** ಎಂದು, ಲಗ್ನಪತ್ರಿಕೆಯನ್ನು ನಿಪಿ–**15** ಎಂದು ಈಗಾಗಲೇ ಗುರುತಿಸಲಾಗಿದೆ. ಆ ಲಗ್ನಪತ್ರಿಕೆಯನ್ನು ವಶಪಡಿಸಿಕೊಂಡ ಬಗ್ಗೆ ನ್ಯಾಯಾಲಯಕ್ಕೆ ಪಿಎಫ್ ಸಲ್ಲಿಸಿದೆ.

**9**. ಅದೇ ದಿನ ಪ್ರಕರಣಕ್ಕೆ ಸಂಬಂಧಿಸಿದ ಸಾಕ್ಷಿದಾರರಾದ ನಾರಪ್ಪ, ಶೋಭ, ವಿಶ್ವನಾಥ, ಮಂಜುನಾಥ, ಕರಿಯಪ್ಪ, ಕರಿಬಸಜ್ಜ, ದೇವೀರಮ್ಮ, ದೊಡ್ಡಬಸಜ್ಜ, ಬಸವರಾಜ್, ಕೊಟ್ರಪ್ಪ, ಗೀತ, ಶೃತಿ ಇವರುಗಳಿಗೆ ನೋಟೀಸುಗಳನ್ನು ಜಾರಿ ಮಾಡಿ, ಠಾಣೆಗೆ ಬರಮಾಡಿಕೊಂಡು ಅವರುಗಳಿಂದ ಹೇಳಿಕೆಗಳನ್ನು ಮಾಡಿಕೊಂಡು ಅವರಿಂದ ಮುಚ್ಚಳಿಕೆ ಪತ್ರವನ್ನು ಪಡೆದುಕೊಂಡೆ.

**10**. ದಿನಾಂಕ **13–01–2022** ರಂದು ಅಣ್ಣನ ಬಳಗ ಇವರು ಸಿರಿಗೆರೆ ಮಠದಲ್ಲಿ ಆರೋಪಿ ಮೃತಳನ್ನು ಮದುವೆಯಾದ ಬಗ್ಗೆ ದಾಖಲೆ ನೀಡಿದ್ದು ಅದನ್ನು ತನಿಖೆಯಲ್ಲಿ ಅಳವಡಿಸಿಕೊಂಡಿದ್ದು ಅದನ್ನು ನೋಡುತ್ತಿದ್ದು ಈಗಾಗಲೇ ನಿಪಿ–**32** ಎಂದು ಗುರುತಿಸಲಾಗಿದೆ. ದಿನಾಂಕ **16–01–2022** ರಂದು ಮೃತಳ ಮರಣೋತ್ತರ ಪರೀಕ್ಷೆ ಕೈಗೊಂಡಂತಹ ಹಿರೇಗುಂಟನೂರು ಪಿಹೆಚ್ ಸಿ ಇವರಿಂದ ಪಡೆದುಕೊಂಡು ತಂದಂತಹ ಮೃತಳ ಒಂದು ಕೆಂಪು

ಬಣ್ಣದ ನೈಟಿ, ಒಂದು ಸ್ಕರ್ಟ್, ಒಂದು ಪೆಟ್ಟಿಕೋಟ್, ಒಂದು ಕರಿ ಬಣ್ಣದ ಅಂಡರ್ ವೇರ್, ಎರಡು ಬೆಡ್ ಶೀಟ್ ಗಳು ಹಾಗೂ ಕೆಳ ದವಡೆಯ ಒಂದು ಹಲ್ಲು ಇವುಗಳನ್ನು ಪಂಚರಾದ ರವಿಕುಮಾರ್ ಹಾಗೂ ಕೃಷ್ಣಮೂರ್ತಿ ಇವರ ಸಮಕ್ಷಮ ಮಹಜರ್ ಮೂಲಕ ಅಮಾನತ್ತುಪಡಿಸಿಕೊಂಡೆ. ಸದರಿ ವಸ್ತುಗಳ ಬಗ್ಗೆ ನ್ಯಾಯಾಲಯಕ್ಕೆ ಪಿಎಫ್ ಸಲ್ಲಿಸಿದೆ. ಸದರಿ ಮುದ್ದೆ ಮಾಲುಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮುದ್ದೆ ಮಾಲು **20** ರಿಂದ **26** ಎಂದು ಗುರುತಿಸಲಾಗಿದ್ದು ಆಗ ಮಾಡಲಾದ ಮಹಜರನ್ನು ನೋಡುತ್ತಿದ್ದು ಅದನ್ನು ನಿಪಿ–**27** ಎಂದು ಗುರುತಿಸಲಾಗಿದೆ.

**11**. ದಿನಾಂಕ **17–01–2022** ರಂದು ಮೃತಳ ಹಲ್ಲಿನಲ್ಲಿರುವ ಡಿಎನ್ಎ ಯೊಂದಿಗೆ ಹೋಲಿಕೆ ಮಾಡಲು ಮೃತಳ ತಂದೆ ಕರಿಯಪ್ಪ ಇವರಿಂದ ರಕ್ತದ ಮಾದರಿ ಪಡೆಯಲು ನ್ಯಾಯಾಲಯದಿಂದ ಅನುಮತಿ ಕೋರಿದೆ. ದಿನಾಂಕ **18–01–2022** ರಂದು ಪಿಡಬ್ಲ್ಯೂಡಿ ಇಲಾಖೆಯಿಂದ ಕೃತ್ಯ ನಡೆದ ಸ್ಥಳದ ನಕಾಶೆಯನ್ನು ಪಡೆದುಕೊಂಡೆ. ಅದನ್ನು ನೋಡುತ್ತಿದ್ದು ಈಗಾಗಲೇ ನಿಪಿ–**33** ಎಂದು ಗುರುತಿಸಲಾಗಿದೆ. ದಿನಾಂಕ **19–01–2022** ರಂದು ಪಂಚಾಯಿತಿಯಿಂದ ಆರೋಪಿತನ ಮನೆಯ ಖಾತಾ ಎಕ್ಸ್ಟ್ರಾಕ್ಟನ್ನು ಮೇಲುಪತ್ರದೊಂದಿಗೆ ಪಡೆದುಕೊಂಡೆ. ಅವುಗಳನ್ನು ನೋಡುತ್ತಿದ್ದು ಮೇಲುಪತ್ರವನ್ನು ನಿಪಿ–**54** ಎಂದು ಖಾತಾ ಎಕ್ಸ್ಟ್ರಾಕ್ಟನ್ನು ನಿಪಿ–**55** ಎಂದು ಗುರುತಿಸಲಾಯಿತು. ಅದೇ ದಿನ ಮೃತಳ ಶವ ತನಿಖಾ ವರದಿಯನ್ನು ಎಸಿ ಯವರಿಂದ ಪಡೆದೆ. ಅದನ್ನು ನೋಡುತ್ತಿದ್ದು ಸದರಿ ವರದಿಯನ್ನು ಈಗಾಗಲೇ ನಿಪಿ–**26** ಎಂದು ಗುರುತಿಸಿದೆ.

**12**. ದಿನಾಂಕ **21–01–2022** ರಂದು ಶಿವಮೊಗ್ಗ ಪೆಥಾಲಜಿ ವಿಭಾಗಕ್ಕೆ ಮೃತಳ ತಲೆ ಬುರುಡೆಯ ಮೂಳೆಯ ತುಂಡನ್ನು ಪರೀಕ್ಷೆಗೆ ಒಳಪಡಿಸುವ ಕುರಿತು ಕಳುಹಿಸಿಕೊಟ್ಟೆ. ಅದೇ ದಿನ ಕರಿಯಪ್ಪ ಇವರ ರಕ್ತವನ್ನು ಸಂಗ್ರಹಿಸುವಂತೆ ನ್ಯಾಯಾಲಯದಿಂದ ಆದೇಶವಾಗಿದ್ದು ಕಾರಣ ಆತನ ರಕ್ತವನ್ನು ಸಂಗ್ರಹಿಸುವಂತೆ ಜಿಲ್ಲಾ ಆಸ್ಪತ್ರೆಗೆ ನಿವೇದಿಸಿಕೊಂಡೆ. ಅಲ್ಲದೇ ಆರೋಪಿ ಕೆಲಸ ಮಾಡುತ್ತಿದ್ದಂತಹ ಅಂಗಡಿಯ ಮಾಲೀಕ ಶಿವರಾಜ್ ಬಿನ್ ತಿಪ್ಪೇಸ್ವಾಮಿರವರ ಹೇಳಿಕೆಯನ್ನು ಮಾಡಿಕೊಂಡೆ.

**13**. ದಿನಾಂಕ **24–01–2022** ರಂದು ನ್ಯಾಯಾಲಯದಲ್ಲಿ ಡಾ. ರೂಪರವರು ಕರಿಯಪ್ಪ ಇವರ ರಕ್ತದ ಮಾದರಿಯನ್ನು ಸಂಗ್ರಹಿಸಿರುತ್ತಾರೆ. ಬಾಂಗಿಗಳನ್ನು ಪರೀಕ್ಷೆಗೆ ಒಳಪಡಿಸುವಂತೆ ಡಿಎನ್ಎ ಕೇಂದ್ರ, ಮಡಿವಾಳ, ಬೆಂಗಳೂರು ಇವರಿಗೆ ಕಳುಹಿಸಿಕೊಟ್ಟೆ.

**14**. ದಿನಾಂಕ **19–03–2022** ರಂದು ಆರ್.ಎಫ್.ಎಸ್.ಎಲ್., ದಾವಣಗೆರೆ, ಪೆಥಾಲಜಿ ವಿಭಾಗ ಶಿವಮೊಗ್ಗ, ಡಿಎನ್ಎ ವಿಭಾಗ, ಮಡಿವಾಳ ಇವರಿಂದ ವರದಿ ಪಡೆದುಕೊಳ್ಳುವುದನ್ನು

ಬಾಕಿ ಇಟ್ಟು ಕಲಂ **173(8)**ಸಿಆರ್.ಪಿಸಿ ಅನ್ವಯ ತನಿಖೆಯನ್ನು ಬಾಕಿ ಇಟ್ಟು ಆರೋಪಿತನ ವಿರುದ್ದ ದೋಷರೋಪಣ ಪತ್ರ ಸಲ್ಲಿಸಿದೆ.

**15**. ದಿನಾಂಕ **12–06–2022** ರಂದು ಆರ್.ಎಫ್.ಎಸ್.ಎಲ್., ದಾವಣಗೆರೆ ಇವರಿಂದ ವರದಿ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡೆ. ದಿನಾಂಕ **01–07–2022** ರಂದು ನನಗೆ ವರ್ಗಾವಣೆಯಾದ ನಿಮಿತ್ತ ಮುಂದಿನ ತನಿಖೆಯನ್ನು ಡಿವೈ.ಎಸ್.ಪಿ ಅನೀಲ್ ಕುಮಾರ್ ರವರಿಗೆ ವಹಿಸಿದೆ. ಸದರಿಯವರು ಪಿ.ಎಂ. ವರದಿಯನ್ನು, ಆರ್.ಎಫ್.ಎಸ್.ಎಲ್., ದಾವಣಗೆರೆ, ಪೆಥಾಲಜಿ ವಿಭಾಗ ಶಿವಮೊಗ್ಗ ಮತ್ತು ಡಿಎನ್ ಎ ವಿಭಾಗ, ಮಡಿವಾಳ ಇವರಿಂದ ವರದಿಗಳನ್ನು ಪಡೆದು ಅವುಗಳನ್ನು ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ ಇವರಿಗೆ ಕಳುಹಿಸಿಕೊಟ್ಟು ಅವರಿಂದ ಅಭಿಪ್ರಾಯ ಪಡೆದು ನಂತರ ಸದರಿ ವರದಿಗಳನ್ನು ಸಾಕ್ಷ್ಯವಾಗಿ ಪರಿಗಣಿಸುವಂತೆ ನ್ಯಾಯಾಲಯಕ್ಕೆ ಸಲ್ಲಿಸಿರುವುದು ಕಂಡುಬರುತ್ತದೆ. ಈ ದಿನ ನ್ಯಾಯಾಲಯದಲ್ಲಿರುವಂತಹ ಆರೋಪಿತನನ್ನು ಗುರುತಿಸುತ್ತೇನೆ. ಆತನನ್ನೇ ನನ್ನ ಮುಂದೆ ಪಿ.ಎಸ್.ಐ. ರಾಜುರವರು ಹಾಜರುಪಡಿಸಿರುತ್ತಾರೆ.

**16**. ಸಿಡಿಯನ್ನು ಪರಿಶೀಲಿಸಲಾಗಿ ಚಾಸಾ–**47** ಮಧುರವರು ಪಿರ್ಯಾದುದಾರ ಕರಿಯಪ್ಪ ಇವರಿಂದ ದಿನಾಂಕ **06–01–2022** ರಂದು ರಾತ್ರಿ **11.00** ಗಂಟೆಗೆ ದೂರನ್ನು ಸ್ವೀಕರಿಸಿ ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿರುವುದು ಕಂಡುಬರುತ್ತದೆ. ಸದರಿ ದೂರನ್ನು ನೋಡುತ್ತಿದ್ದು ಅದನ್ನು ನಿಪಿ–**1** ಎಂದು ಈಗಾಗಲೇ ಗುರುತಿಸಲಾಗಿದ್ದು, ಅವರು ಸಲ್ಲಿಸಿದಂತಹ ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು ಅವರ ಸಹಿಯನ್ನು ನಾನು ಗುರುತಿಸುತ್ತಿದ್ದು ಸದರಿ ಪ್ರಥಮ ವರ್ತಮಾನ ವರದಿಯನ್ನು ನಿಪಿ–**56** ಎಂದು ಅವರ ಸಹಿಯನ್ನು ನಿಪಿ–**56**(ಎ) ಎಂದು ಗುರುತಿಸಲಾಯಿತು. ನಾರಪ್ಪ ನನ್ನ ಮುಂದೆ ನಿಪಿ–**13** ರಂತೆ ಹೇಳಿಕೆಯನ್ನು ಕೊಟ್ಟಿದ್ದಾರೆ.

ಈ ಹಂತದಲ್ಲಿ ಶ್ರೀಮತಿ ಎಂ.ಬಿ. ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೇವಲ ಒಂದು ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.